ನಾಗರಾಜರಷ್ಟೇ ವಯಸ್ಸಿನ ವಿಭಾಗದ ಆಯಾ ಕೆಲಸದ ಆಂಟಿಯನ್ನು 'ಹೋಗಾಂಟಿ... ಹೋಗಾಂಟಿ...' ಎಂದು ಹುರಿದುಂಬಿಸಿ ಮುಂದೆ ತಳ್ಳಿದ್ದ. ಈ ಏಳೂರ ವೈಭೋಗದಲ್ಲಿ ಮೈಮರೆತಿದ್ದ ನಾಗರಾಜರು ಆಯಮ್ಮನ ಕೈ ಹಿಡಿದುಕೊಂಡು 'ಬಾ ಪ್ರಿಯ ಮೋಹಿನಿ... ಬಾ ಪ್ರಿಯ ಕಾಮಿನಿ... ತಂಗಾಳಿ ತೀಡಿ ಬಂತು ಹೂಗಂಧ, ಚೆಲ್ಲಾಡಿ ಹೋಯ್ತು ದುಂಬಿ ಆನಂದ, ಓಹೋ... ಓಹೋ... ಓಹೋಹೋ...' ಅಂತವ ಆಯಮ್ಮ ನಾಚಿಕ್ಕಂಡು ಅಲ್ಲಿಂದ ಓಡಿ ಹೋಗಂಗೆ ಕುಣಿದು ಬಿಸಾಕಿ ಅಂಗಿ ಕಾಲರ್ ಹಿಡಿದು ಕೊಡವಿಕೊಂಡರು.

ಆಯಮ್ಮ ಅಲ್ಲಿಂದ ನಾಚಿ ಓಡುವಾಗ ಮಿನಿ ರಂಗಮಂದಿರದಲ್ಲಿ ನಿಂತಿದ್ದವರಲ್ಲಿ ಕೆಲವರು ಉಲ್ಲುಲ್ಲಾಕ್ಕಂಡು ನಕ್ಕಿದ್ದರು, ಚಪ್ಪಾಳೆ ತಟ್ಟಿದ್ದರು. ಈ ವಿಪರೀತ ಪ್ರೋತ್ಸಾಹದಿಂದ ಉಬ್ಬಿಹೋದ ನಾಗರಾಜರು ಈ ಬಿಟ್ಟಿ ರಸಮಂಜರಿಯನ್ನು ಸವಿಯುತ್ತಾ ನಿಂತಿದ್ದ ವಿದ್ಯಾರ್ಥಿಯೊಬ್ಬನ ಕೈಯಲ್ಲಿದ್ದ ವಾಟರ್ ಬಾಟಲ್ ಈಸ್ಕಂಡು ಚೈನಾಸೆಟ್ ಮೊಬೈಲ್‌ಗಳ ಹಾಟ್ ಫೇವರೇಟ್ ಆದ 'ಸಾರಾಯಿ ಸೀಸೆಯಲಿ, ನನ್ನ ದೇವಿ ಕಾಣುವಳು' ಅಂತ ತಟ್ಟಾಡುತ್ತಾ ಆಕ್ಟಿಂಗ್ ಮಾಡಿದ್ದಲ್ಲದೆ, ಅಣ್ಣಾವ್ರದೊಂದು ಹಾಡಿಗೆ ನೀವು ಕುಣೀಲೇಬೇಕು ಎಂಬ ರಸಿಕ ವಿದ್ಯಾರ್ಥಿಗಳ ಒತ್ತಾಯದ ಮೇರೆಗೆ 'ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ ಮತದಲ್ಲಿ ಮೇಲ್ಯಾವುದೋ' ಹಾಡಿಗೆ ಸಿನಿಮಾದಲ್ಲಿ ಇದ್ದಂತವೇ ಸ್ಟೆಪ್ ಹಾಕಿ ವಿಪರೀತ ಚಪ್ಪಾಳೆ ಗಿಟ್ಟಿಸಿಕೊಂಡು ಅಣ್ಣಾವ್ರ ತರವೇ ಕೈ ಬೀಸಿ ಅಭಿಮಾನಿ ದೇವರುಗಳಿಗೆ ನಮಸ್ಕರಿಸಿ ಅಲ್ಲಿಂದ ಹೊರಟರು.

ತಾನು ಅಪಾಯಿಂಟ್ ಆಗಿ ಇಷ್ಟು ವರ್ಷ ಕಳೆದರೂ ಎಂದೂ ಇಂಥ ರಸಮಂಜರಿಯ ಬಗ್ಗೆ ಯೋಚಿಸಿಯೂ ಇರದ ನಾಗರಾಜರು ಅದೇನು ಗ್ರಹಚಾರ ಕೆಟ್ಟು ಇವತ್ತು ಇಂಗೆ ಕುಣಿದಾಡಿದರೋ ತಿಳಿದಿಲ್ಲ. ಆಗ ತಾನೇ ಕಾರು ಕಲಿತು ಡಿ.ಎಲ್. ಟೆಸ್ಟಿಗೇ ಹೋಗದೆ ಅಲ್ಲಿದ್ದ ಮೀಡಿಯೇಟ್ರು ಕೈ ಬೆಚ್ಚಗೆ ಮಾಡಿ ಫಸ್ಟ್ ಕ್ಲಾಸಲ್ಲಿ ಪಾಸಾಗಿ ಲೈಸೆನ್ಸ್ ಪಡೆದುಕೊಂಡಿದ್ದ ಜಗದ್‌ಗೈಡ್ ನಾಗರಾಜರ ಕಾರು ಇನ್ನೂ ಯೂನಿವರ್ಸಿಟಿಯ ಮೈನ್ ಗೇಟ್ ದಾಟಿಲ್ಲ ಅದಾಗಲೇ ನೀ ಮೀಟಿದ ನೆನಪೆಲ್ಲವೂ... ಹಾಡಿನೊಂದಿಗೆ ಫೋನಿನ ಮೇಲೆ ಫೋನು ಬರಲಾರಂಭಿಸಿದ್ದವು. ಒಂದೇ ಸಮನೇ ಬರುತ್ತಿದ್ದ ಫೋನುಗಳನ್ನು ಕಂಡು ಶಿಷ್ಯನ ಸಹವಾಸದಿಂದ ಕಲಿತಿದ್ದ 'ಥೋ ನಮ್ಮೊನ್' ಎನ್ನುತ್ತಾ ಕಾರಿನ ಗೇರನ್ನು ಇಳಿಸಿ, ಸೈಡಿಗೆ ಹಾಕಿ ಹ್ಯಾಂಡ್ ಬ್ರೇಕ್ ಎತ್ತಿದರು.

ತಮ್ಮ ಸಿಸ್ಯ ಶೇಖರಿಯ ಆರು, ವಿ.ಸಿ.ಯವರ ನಾಲ್ಕು ಕರೆಗಳ ಜೊತೆಗೆ ಅನೇಕ ಅನ್ನೌನ್ ನಂಬರ್‌ಗಳು ನಾಗರಾಜರ ಸಂಪರ್ಕ ಸಾಧಿಸಲು ವಿಫಲವಾಗಿ ನೆಗೆದು ಬಿದ್ದಿದ್ದವು. ಶೇಖರಿಯ ಕರೆ ಅಂಗಿರಲಿ ಎಂದುಕೊಂಡರಾದರೂ, ನಾಲ್ಕು ಬಾರಿ ಬಡಿದುಕೊಂಡಿದ್ದ ವಿ.ಸಿ.ಯವರ ನಂಬರ್ ಕಂಡು ಗಾಬರಿ ಬಿದ್ದರು!

ಅಪಾಯಿಂಟ್ ಆದಾಗಿಂದ ಮೂರು ಜನ ವಿ.ಸಿ.ಗಳು ಬಂದು ಹೋಗಿದ್ದರೂ ಯಾರೂ ಯಾಕೂ ನನಗೆ ಒಂದು ದಿನವೂ ಫೋನ್ ಮಾಡಿ 'ತುಮ್ಹಾರಾ ನಾಮ್ ಕ್ಯಾ ಹೆ ದಾಸಪ್ಪ, ಯಾವೂರು ನಿಂದು?' ಎಂದಿರಲಿಲ್ಲ. ಎಲಾ ನನ್ನ ಜನುಮವೇ ಇಂಥಾ ದೊಡ್ಡ ವಿಶ್ವವಿದ್ಯಾನಿಲಯದ ವಿ.ಸಿ. ನನಗೆ ಫೋನ್ ಮಾಡುವುದು, ಅವರು ನನ್ನ ನಂಬರ್ ಅನ್ನು ಸೇವ್ ಮಾಡಿಕೊಳ್ಳುವುದು ಎಂದರೇನು ಹುಡುಗಾಟವೇ? ಯಾವುದೋ ಬೆಟ್ಟ-ಗುಡ್ಡಗಳ ಮೂಲೆಯಲ್ಲಿ ಬಿದ್ದಿರುವ ಊರಿನಿಂದ ಬಂದ ನಾನು ಈ ಮಟ್ಟಿಗೆ ಬೆಳೆದು ನಿಂತಿದ್ದು ತಿಳಿದರೆ ನನ್ನೂರಿನಲ್ಲಿ ಇಂದಿಗೂ ನನ್ನನ್ನು ಮುಟ್ಟಾಳ ಎಂದೇ ಕರೆಯುವ ಚೇರ್ಮನ್ ಸಂತಾನಭಾಗ್ಯಪ್ಪನಿಗೆ ಅದೆಷ್ಟು ಅಪಮಾನವಾಗಬಹುದು ಎಂದು ಯೋಚಿಸಿ ಒಳೊಳಗೇ ಬಹಳ ಸಂಭ್ರಮಪಟ್ಟರು.

ಹೀಗೆ ಫೋನು ಕೈಯಲ್ಲಿದ್ದಾಗಲೇ ಸಿಸ್ಯ ಶೇಖರಿಯ ಕರೆಯು 'ಎತ್ತಿ ಅಪ್ಪಾಜಿ, ಎತ್ತಿ ಅಪ್ಪಾಜಿ' ಎನ್ನುವಂತೆ ಫೋನ್ ಸ್ಕ್ರೀನ್ ಮೇಲೆ ಕುಣಿದಾಡುತ್ತಿತ್ತು. ತನ್ನ ಸಿಸ್ಯನ ಹೆಸರನ್ನು 'ನಮ್ಮೊನ್' ಎಂದೇ ಸೇವ್ ಮಾಡಿಕೊಂಡಿದ್ದ ನಾಗರಾಜರು ಒಂದೇ ಏಟಿಗೆ ಅವನ ಫೋನ್ ಎತ್ತಿ 'ಯಾಕ್ಲಾ' ಅಂದರು. 'ಗುರುಗಳೇ ಅಂದರ್ ಆಗಿ, ನಾನು ಹೇಳೋವರೆಗೂ ಯಾವ ಫೋನು ತೆಗಿಬೇಡಿ, ಯಾರ ಕೈಗೂ ಸಿಗಬೇಡಿ. ಟೀವೀಲಿ ಬರ್ತಿದೆ...' ಅನ್ನೋ ಅಷ್ಟೊತ್ತಿಗೆ ಶೇಖರಿಯ ಮೊಬೈಲ್ ಬ್ಯಾಟರಿ ಮುಗಿದು ಫೋನ್ ಸ್ವಿಚ್ ಆಫ್ ಆಯ್ತು. ಇಲ್ಲಿಯವರೆಗೆ ತನ್ನ ಕೀರ್ತಿಯ ಕುರಿತು ಕನಸು ಕಾಣುತ್ತಿದ್ದ ನಾಗರಾಜರು - ಏನೋ ಆಗಬಾರದ್ದು ಆಗಿ ಹೋಗಿದೆ. ಅದಕ್ಕೇ ವಿ.ಸಿ. ಫೋನ್ ಮಾಡುತ್ತಿರುವುದು. ಈ ಅನ್ನೌನ್ ಕರೆಗಳೆಲ್ಲಾ